# ‘ಜುಗಾರಿ ಕ್ರಾಸ್’ ಒಳಗೆ



ಕಳೆದ ವರ್ಷವಷ್ಟೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥೆಯಾಧಾರಿತ ‘ಡೇರ್ ಡೆವಿಲ್ ಮುಸ್ತಾಫಾ’ ಸಿನಿಮಾ ತೆರೆಕಂಡು ಯಶಸ್ಸು ಸಾಧಿಸಿತ್ತು. ಇದೀಗ ಅವರ ಮತ್ತೊಂದು ಕೃತಿ ‘ಜುಗಾರಿ ಕ್ರಾಸ್’ ಕೂಡ ಸಿನಿಮಾ ಆಗುತ್ತಿದೆ.

ಪೂರ್ಣಚಂದ್ರ ತೇಜಸ್ವಿ ಅವರ ‘ಜುಗಾರಿ ಕ್ರಾಸ್’ ಕಥೆಯನ್ನು ತೆರೆಗೆ ತರಲು ಕೆಲವು ನಿರ್ದೇಶಕರು ಪ್ರಯತ್ನಿಸಿದ್ದರು. ಮೊದಲ ಬಾರಿ ಕೋಡ್ಲು ರಾಮಕೃಷ್ಣ ಅವರು ಆ ಪ್ರಯತ್ನಕ್ಕೆ ಕೈ ಹಾಕಿದ್ದರು. ಆನಂತರ ಟಿ.ಎಸ್. ನಾಗಾಭರಣ ಕೂಡ ಪ್ರಯತ್ನಿಸಿದ್ದರು. ಇದೀಗ ‘ಅಂಬಿ ನಿಂಗ್ ವಯಸ್ಸಾಯ್ತೊ’ ಸಿನಿಮಾ ಖ್ಯಾತಿಯ ಗುರುದತ್ತ ಗಾಣಿಗ ಈ ಕಥೆಯನ್ನು ಸಿನಿಮಾ ಮಾಡುತ್ತಿದ್ದಾರೆ.

ಮಲೆನಾಡಿನ ಕೃಷಿಕ ದಂಪತಿಗಳ ಸ್ವಾರಸ್ಯಕರ ಕಥೆ ಇದಾಗಿದ್ದು, ಓದುಗರ ನೆಚ್ಚಿನ ಕೃತಿಗಳಲ್ಲಿ ಒಂದು.

“ಕಳೆದ ಐದು ವರ್ಷಗಳಿಂದ ಈ ಕಥೆಯ ಹಕ್ಕು ಪಡೆಯಲು ಪ್ರಯತ್ನಿಸುತ್ತಿದ್ದೆ. ಇದೀಗ ‘ಜುಗಾರಿ ಕ್ರಾಸ್’ ಅನ್ನು ತೆರೆ ಮೇಲೆ ತರುವ ಸಮಯ ಬಂದಿದೆ. ಶೀಘ್ರದಲ್ಲೇ ಕಲಾವಿದರನ್ನು ಪರಿಚಯಿಸಲಾಗುವುದು” ಎಂದಿದ್ದಾರೆ ಗುರುದತ್.



# ಸಂಸ್ಕೃತ ಸಿನಿಮಾದಲ್ಲಿ ರಾಗಿಣಿ

ಜನಾರ್ದನ ಮಹರ್ಷಿ ನಿರ್ದೇಶನದ ಸಂಸ್ಕೃತ ಸಿನಿಮಾವೊಂದರಲ್ಲಿ ನಟಿ ರಾಗಿಣಿ ದ್ವಿವೇದಿ ನಟಿಸುತ್ತಿದ್ದು, ಈ ಸಿನಿಮಾದಲ್ಲಿ ತಮ್ಮ ಪಾತ್ರದ ಕುರಿತು, ಜೊತೆಗೆ ಸ್ಮಶಾನಗಳಲ್ಲಿ ಚಿತ್ರೀಕರಣದಲ್ಲಿ ಪಾಲ್ಗೊಂಡ ಅನುಭವಗಳನ್ನು ಹಂಚಿಕೊಂಡಿದ್ದಾರೆ.

‘ಸಿನಿಮಾದ ಭಾಗವಾಗಿ ರುದ್ರಭೂಮಿಗಳಲ್ಲಿ ಚಿತ್ರೀಕರಣ ನಡೆಸಲಾಯಿತು. ಭಾರತೀಯ ಸಂಸ್ಕೃತಿಯು ವ್ಯಕ್ತಿಯ ಅಂತಿಮ ಕಾರ್ಯದಲ್ಲಿ, ಆಚರಣೆಗಳಲ್ಲಿ ಮಹಿಳೆಯನ್ನು ಹೆಚ್ಚು ಒಳಗೊಳ್ಳುವುದಿಲ್ಲ. ಆದರೆ ನನ್ನ ಪಾತ್ರ ಭಿನ್ನವಾಗಿದೆ. ಸಿನಿಮಾ ನೆಪದಲ್ಲಿ ಭಿನ್ನ ಭಿನ್ನ ಸಂಸ್ಕೃತಿಗಳನ್ನು ಎಕ್ಸ್‌ಪ್ಲೋರ್ ಮಾಡುವ ಅವಕಾಶವೂ ದೊರೆತಿದೆ’ ಎಂದಿದ್ದಾರೆ.

‘ಶ್ಲೋಕಾ’ ಸಿನಿಮಾದಲ್ಲಿ ರಾಗಿಣಿ ಈ ಹಿಂದಿಗಿಂತ ವಿಭಿನ್ನ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ‘ಇದು ಪ್ರಕೃತಿಯೊಂದಿಗೆ ಒಡನಾಡುವ ಪಾತ್ರ. ಆಕೆಯ ಜ್ಞಾನೋದಯದ ಹಾದಿ ಕೂಡ’ ಎಂದು ಪಾತ್ರದ ಬಗ್ಗೆ ವಿವರಿಸಿದ್ದಾರೆ.

‘ನನ್ನ ಜೀವನದಲ್ಲಿ ನಾನು ಏನನ್ನೂ ಪ್ಲಾನ್ ಮಾಡುವುದಿಲ್ಲ. ನನ್ನ ಹಾದಿಯಲ್ಲಿ ಬಂದ ಅವಕಾಶಗಳನ್ನು ಉಪಯೋಗಿಸಿಕೊಂಡಿದ್ದೇನೆ. ಜೀವನದಲ್ಲಿ ಏನೇ ಮಾಡಿ, ಏನೇ ಆಗಿರಿ, ಎಷ್ಟೇ ಹಣ ಮಾಡಿರಿ, ಎಲ್ಲರಿಗೂ ಒಂದು ಅಂತ್ಯ ಎಂಬುದು ಇದ್ದೇ ಇರುತ್ತದೆ. ಈ ಸಿನಿಮಾ ಅದನ್ನು ಮತ್ತೆ ಮನವರಿಕೆ ಮಾಡುತ್ತದೆ’ ಎಂದಿದ್ದಾರೆ.

# ಸುತ್ತ ಸಂತೆ ಇದ್ದರೂ...

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ, ವಂಶಿ ನಟಿಸಿ, ನಿರ್ದೇಶಿಸಿರುವ ‘ಫೈರ್ ಫ್ಲೈ’ ಸಿನಿಮಾ ತೆರೆ ಮೇಲೆ ಬರಲು ಸಜ್ಜಾಗುತ್ತಿದೆ.

ಸಿನಿಮಾ ಕೇಂದ್ರಬಿಂದು ‘ವಿಕ್ಕಿ’ ಪಾತ್ರ ಪರಿಚಯದ ಟೀಸರ್ ಅನ್ನು ಈಚೆಗೆ ಚಿತ್ರತಂಡ ಬಿಡುಗಡೆಗೊಳಿಸಿದ್ದು, ಹಲವು ಭಾವಗಳ ಮಿಶ್ರಣದ ಈ ಪಾತ್ರ ಪ್ರೇಕ್ಷಕರ ಚಿತ್ತ ಸೆಳೆಯುತ್ತದೆ ಎಂದಿದೆ ಚಿತ್ರತಂಡ.

‘ಸುತ್ತ ಸಂತೆ ಇದ್ದರೂ ಯಾರೂ ನನ್ನವರಲ್ಲ ಎನ್ನುವ ಅನಾಥಬಾವ ಕಾಡುತ್ತಲ್ಲಾ ಅದು ಹಾರಿಬಲ್’ ಎನ್ನುತ್ತಾ ತನ್ನ ಏಕಾಂತದ ಸಮಸ್ಯೆಯನ್ನು ಹಂಚಿಕೊಳ್ಳುವ ವಿಕ್ಕಿ ಪಾತ್ರ ವಾಸ್ತವಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ ಎಂದಿದೆ ತಂಡ.

ಚಿತ್ರಕ್ಕೆ ಚರಣ್ ರಾಜ್ ಸಂಗೀತವಿದೆ. ವಂಶಿಗೆ ಜೋಡಿಯಾಗಿ ರಚನಾ ಇಂದರ್ ನಟಿಸಿದ್ದು, ಅಚ್ಯುತ್ ಕುಮಾರ್, ಸುಧಾರಾಣಿ, ಶೀತಲ್ ಶೆಟ್ಟಿ, ಮೂಗು ಸುರೇಶ್, ಚಿತ್ಕಲಾ ಬಿರಾದಾರ್, ಸಿಹಿ ಕಹಿ ಚಂದ್ರು ತಾರಾಬಳಗದಲ್ಲಿದ್ದಾರೆ. ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ವರ್ಷಾಂತ್ಯಕ್ಕೆ ಸಿನಿಮಾವನ್ನು ತೆರೆಗೆ ತರುವ ಯೋಜನೆ ಹಾಕಿಕೊಂಡಿದೆ.

